# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## **ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 29-03-2021 ಪ್ರಶ್ನೆ ಸಂಖ್ಯೆ : 2055 (2341)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 29-03-2021

ಉತ್ತರಿಸುವ ಸಚಿವರು: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ವಿಷಯ : ಶಿಕ್ಷಣಾಧಿಕಾರಿಗಳಿಗೆ ಸ್ಥಾನಪನ್ನ ಬಡ್ತಿ ನೀಡುವ ಬಗ್ಗೆ

(ಅ) ಶಿಕ್ಷಣ ಇಲಾಖೆಯ ಅಧಿಸೂಚನೆ ಸಂಖ್ಯೆ: ಇಡಿ 155 ಡಿಜಿಎಂ 2017 ದಿನಾಂಕ: 02.02.2018 ರಲ್ಲಿ ಶಿಕ್ಷಣ ಇಲಾಖೆಯ ಗ್ರೂ.ಪ್ `ಬಿ' ವೃಂದದ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ವೃಂದದ ಹುದ್ದೆಗಳಿಂದ ಗ್ರೂಪ್ `ಎ' ವೃಂದದ ಶಿಕ್ಷಣಾಧಿಕಾರಿ /ತತ್ಸಮಾನ ವೃಂದದ ಹುದ್ದೆಗೆ, ನಿಯಮ 32ರಡಿ ಸ್ವತಂತ್ರ ಪ್ರಭಾರದಲ್ಲಿರಿಸಿದ್ದ 69 ಅಧಿಕಾರಿಗಳ ಪೈಕಿ ಕೆಲವರುಗಳಿಗೆ ಮಾತ್ರ ಸ್ಥಾನಪನ್ನ ಬಡ್ತಿ ನೀಡಿ, ಉಳಿದವರಿಗೆ ಸುಮಾರು 3 ವರ್ಷಗಳು ಕಳೆದರೂ ಇದುವರೆವಿಗೂ ಸ್ಥಾನಪನ್ನ ಬಡ್ತಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹೌದಾದಲ್ಲಿ, ಸದರಿ ಅಧಿಸೂಚನೆಯಲ್ಲಿರುವ ಎಷ್ಟು ಅಧಿಕಾರಿಗಳಿಗೆ ಸ್ಥಾನಪನ್ನ ಬಡ್ತಿ ನೀಡಲಾಗಿದೆ ; (ಆದೇಶದ ಪ್ರತಿ ನೀಡುವುದು)

(ಇ) ಇನ್ನೂ ಎಷ್ಟು ಅಧಿಕಾರಿಗಳಿಗೆ ಸ್ಥಾನಪನ್ನ ಬಡ್ತಿ ನೀಡಬೇಕಾಗಿರುತ್ತದೆ; ಇದುವರೆವಿಗೂ ಸ್ಥಾನಪನ್ನ ಬಡ್ತಿ ನೀಡದಿರಲು ಕಾರಣಗಳೇನು ; (ಅವರ ಹೆಸರುಗಳ ಸಮೇತ ಸಂಪೂರ್ಣ ಮಾಹಿತಿ ನೀಡುವುದು)

(ಈ) ಯಾವ ಕಾಲಮಿತಿಯೊಳಗೆ ಇವರುಗಳಿಗೆ ಸ್ಥಾನಪನ್ನ ಬಡ್ತಿ ನೀಡಲಾಗುವುದು ? (ಮಾಹಿತಿ ಒದಗಿಸುವುದು)